ಅಶೋಕಪುರಂ, ಅರಣ್ಯ ಭವನ, ಮೈಸೂರು
ದೂರವಾಣಿ:0821-2481159
ಇ-ಮೇಲ್ : dcfwlmys@gmail.com

# ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ವನ್ಯಜೀವಿ ವಿಭಾಗ, ಮೈಸೂರು

ಸಂಖ್ಯೆ ಎ2/ಎಸಿಟಿ/ಜಿಎಲ್-396/2021-22 ದಿನಾಂಕ:-28.03.2022

ರವರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಮಂಡ್ಯ ವಿಭಾಗ,
ಮಂಡ್ಯ

ಮಾನ್ಯರೇ

ವಿಷಯ: ಶ್ರೀರಂಗಪಟ್ಟಣ ತಾಲ್ಲೂಕಿನ ಮಹದೇವಪುರ, ಕೆ.ಶೆಟ್ಟಿಹಳ್ಳಿ, ಚಿಕ್ಕಂಕನಹಳ್ಳಿ ಹಾಗೂ ಇತರೆ 16 ಗ್ರಾಮಗಳಿಗೆ ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಕುರಿತು.

ಉಲ್ಲೇಖ:
1. ನಿಮ್ಮ ಕಛೇರಿ ಪತ್ರ ಸಂಖ್ಯೆ: ಸಿ1/ಭೂಮಿ/ಎಫ್.ಸಿ/ಸಿಆರ್ /2021-22 ದಿನಾಂಕ: 25.10.2021
2. ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ: 02.11.2021.
3. ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಮೈಸೂರು ಇವರ ಪತ್ರ ಸಂಖ್ಯೆ: ವಅಅ/ವಜೀವ/ಮೈ/ಅ.ಭೂ/2021-22 ದಿನಾಂಕ: 07.02.2022.
4. ಈ ಕಛೇರಿ ಸಭಾ ಸೂಚನಾ ಪತ್ರ ಸಂಖ್ಯೆ: ಎ2/ಎಸಿಟಿ/ಸು.ಪ.ವ/ಸಭೆ/ ಜಿ.ಎಲ್-1054/18-19 ದಿನಾಂಕ: 29.01.2022
5. ವನ್ಯಜೀವಿ ವಿಭಾಗದ ವನ್ಯಧಾಮಗಳ ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಸಭಾ ನಡಾವಳಿ ದಿನಾಂಕ: 09.02.2022.

*-*-*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ನಿಮ್ಮ ಕಛೇರಿ ಪತ್ರದಲ್ಲಿ ಶ್ರೀರಂಗಪಟ್ಟಣ ತಾಲ್ಲೂಕಿನ ಮಹದೇವಪುರ, ಕೆ.ಶೆಟ್ಟಿ ಹಳ್ಳಿ, ಚಿಕ್ಕಂಕನಹಳ್ಳಿ ಹಾಗೂ ಇತರೆ 16 ಗ್ರಾಮಗಳಿಗೆ ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ ಸದರಿ ಯೋಜನೆಯ ಪೈಪ್ ಲೈನ್ ಕಾಮಗಾರಿ ಪ್ರದೇಶವು ರಂಗನತಿಟ್ಟು ಪಕ್ಷಿಧಾಮದ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಈ ಬಗ್ಗೆ ಅಭಿಪ್ರಾಯ ನೀಡಲು ಕೋರಿದ ಮೇರೆಗೆ, ಉಲ್ಲೇಖ (2)ರ ಈ ಕಛೇರಿ ಪತ್ರದಲ್ಲಿ ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಮೈಸೂರು ಇವರಿಗೆ ಸದರಿ ಪ್ರದೇಶದ ಸ್ಥಳ ಪರಿಶೀಲಿಸಿ, ಸ್ಪಷ್ಟ ಅಭಿಪ್ರಾಯ ನೀಡಲು ಸೂಚಿಸಲಾಗಿರುತ್ತದೆ.

ಉಲ್ಲೇಖ (3)ರ ವರದಿಯಲ್ಲಿ ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಮೈಸೂರು ಇವರು ಮೇಲ್ಕಂಡ ಪ್ರಸ್ತಾಪಿತ ಯೋಜನೆಗೆ ನಿರಾಕ್ಷೇಪಣಾ ಪತ್ರ ಕೋರಿರುವ ಸ್ಥಳವು ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಗೆ ಒಳಪಡುತ್ತಿರುವುದರಿಂದ, ಈ ಕುರಿತು, ಸೂಕ್ಷ್ಮ ಪರಿಸರ ವಲಯ ಸಮಿತಿಯ ಮುಂದೆ ಪ್ರಸ್ತಾವನೆಯನ್ನು ಮಂಡಿಸಬೇಕಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ.

ಉಲ್ಲೇಖ (4)ರ ಈ ಕಛೇರಿ ಪತ್ರದಲ್ಲಿ ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ಇವರ ಪತ್ರ ದಿನಾಂಕ: 25.01.2022ರ ನಿರ್ದೇಶನದ ಮೇರೆಗೆ ಮೈಸೂರು ವನ್ಯಜೀವಿ ವಿಭಾಗದ ವನ್ಯಧಾಮಗಳ ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಸಭೆಯನ್ನು ನಡೆಸಲು ಸಭಾ ಸೂಚನಾ ಪತ್ರ ಹೊರಡಿಸಲಾಗಿರುತ್ತದೆ.

ಉಲ್ಲೇಖ (5)ರಲ್ಲಿ ದಿನಾಂಕ: 09.02.2022ರಂದು ಅಧ್ಯಕ್ಷರು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ಇವರ ಅಧ್ಯಕ್ಷತೆಯಲ್ಲಿ ಮೈಸೂರು ವನ್ಯಜೀವಿ ವಿಭಾಗದ ವನ್ಯಧಾಮಗಳ ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಸಭೆಯನ್ನು ನಡೆಸಲಾಗಿ, **ಸದರಿ ಪ್ರಸ್ತಾವನೆಯಲ್ಲಿರುವ**

ಪ್ರದೇಶಗಳ ಪೈಕಿ ಮಹದೇವಪುರ ಅಣೆಕಟ್ಟು ಪ್ರದೇಶವು ರಂಗನತಿಟ್ಟು ಪಕ್ಷಿಧಾಮದ ಗಂಡೆಹೊಸಹಳ್ಳಿ ದ್ವೀಪ ಅರಣ್ಯ ಪ್ರದೇಶದಿಂದ **1.53 ಕಿ.ಮೀ ದೂರವಿರುತ್ತದೆ ಹಾಗೂ ಸೂಕ್ಷ್ಮ ಪರಿಸರ ವಲಯದ ಗಡಿರೇಖೆಯಿಂದ 0.09 ಕಿ.ಮೀ ಒಳಗೆ ಬರುತ್ತದೆ.** ಸದರಿ ಕಾಮಗಾರಿಯು ಸೂಕ್ಷ್ಮ ಪರಿಸರ ವಲಯದ ಅಧಿಸೂಚನೆಯಂತೆ ರೆಗ್ಯೂಲೇಟ್ ಚಟುವಟಿಕೆಗಳಡಿಗೆ (Regulated activities) ಒಳಪಡುತ್ತದೆ ಎಂದು ಸದಸ್ಯ ಕಾರ್ಯದರ್ಶಿಗಳು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು ವನ್ಯಜೀವಿ ವಿಭಾಗ, ಮೈಸೂರು ಇವರು ವಿವರಣೆ ನೀಡಿದರು.

ಈ ಕುರಿತು ಅಧ್ಯಕ್ಷರು ಈ ಯೋಜನೆಯು ಬಹು ಗ್ರಾಮಗಳ ಕುಡಿಯುವ ನೀರಿನ ಯೋಜನೆಯಾಗಿದ್ದು, ಮೂಲಭೂತ ಸೌಕರ್ಯವಾಗಿರುವುದರಿಂದ ಹಾಗೂ ಸದರಿ ಯೋಜನೆಯ ಸ್ಥಳವು ರಂಗನತಿಟ್ಟು ಪಕ್ಷಿಧಾಮದ ಗಂಡೆಹೊಸಹಳ್ಳಿ ದ್ವೀಪದ ಗಡಿಯಿಂದ 1.00 ಕಿ.ಮೀ.ಗಿಂತ ಹೆಚ್ಚಿನ ದೂರವಿರುವುದರಿಂದ (1.53 ಕಿ.ಮೀ), ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಮಂಡ್ಯ ಇವರು ಕೋರಿರುವಂತೆ, ಸದರಿ ಕಾಮಗಾರಿಯು ಸೂಕ್ಷ್ಮ ಪರಿಸರ ವಲಯದ ಅಧಿಸೂಚನೆಯಂತೆ ರೆಗ್ಯೂಲೇಟ್ ಚಟುವಟಿಕೆಗಳಡಿಗೆ (Regulated activities) ಒಳಪಡುವುದರಿಂದ, ರಂಗನತಿಟ್ಟು ಪಕ್ಷಿಧಾಮದ ಸೂಕ್ಷ್ಮ ಪರಿಸರ ವಲಯದ ಒಳಗೆ ಹಾದುಹೋಗುವ ಪೈಪ್ ಲೈನ್ ಕಾಮಗಾರಿಗೆ ಸಂಬಂಧಪಟ್ಟಂತೆ ಮಾತ್ರ, ಸೂಕ್ಷ್ಮ ಪರಿಸರ ವಲಯದ ಷರತ್ತುಗಳಿಗೆ ಒಳಪಟ್ಟು ಯೋಜನೆಗೆ ಅನುಮತಿ ನೀಡುವುದು ಎಂದು ಹಾಗೂ ಮಂಡ್ಯ ಪ್ರಾದೇಶಿಕ ಅರಣ್ಯ ವಿಭಾಗಕ್ಕೆ ಸಂಬಂಧಿಸಿದ ಜಾಗದಲ್ಲಿ ಕೈಗೊಳ್ಳುವ ಕಾಮಗಾರಿ ಹಾಗೂ ಇನ್ನಿತರೆ ಚಟುವಟಿಕೆಗಳಿಗೆ ಸಂಬಂಧಿಸಿದಂತೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಂಡ್ಯ ಪ್ರಾದೇಶಿಕ ವಿಭಾಗ, ಮಂಡ್ಯ ಇವರನ್ನು ಸಂಪರ್ಕಿಸಿ ಕಾನೂನಿನ ರೀತ್ಯ ಕ್ರಮ ಕೈಗೊಳ್ಳಬಹುದಾಗಿರುತ್ತದೆ ಎಂದು ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಮೇಲೆ ವಿವರಿಸಿದ ಹಿನ್ನಲೆಯಲ್ಲಿ ಹಾಗೂ ದಿನಾಂಕ: 09.02.2022ರಂದು ನಡೆದ ಮೈಸೂರು ವನ್ಯಜೀವಿ ವಿಭಾಗದ ವನ್ಯಧಾಮಗಳ ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ ಸಭೆಯಲ್ಲಿ ತೀರ್ಮಾನಿಸಿದಂತೆ, ಶ್ರೀರಂಗಪಟ್ಟಣ ತಾಲ್ಲೂಕಿನ ಮಹದೇವಪುರ, ಕೆ.ಶೆಟ್ಟಿಹಳ್ಳಿ, ಚಿಕ್ಕಂಕನಹಳ್ಳಿ ಹಾಗೂ ಇತರೆ 16 ಗ್ರಾಮಗಳಿಗೆ ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ, **ರಂಗನತಿಟ್ಟು ಪಕ್ಷಿಧಾಮದ ಸೂಕ್ಷ್ಮ ಪರಿಸರ ವಲಯದ ಒಳಗೆ ಹಾದುಹೋಗುವ ಪೈಪ್ ಲೈನ್ ಕಾಮಗಾರಿಗೆ ಸಂಬಂಧಪಟ್ಟಂತೆ ಮಾತ್ರ, ಸೂಕ್ಷ್ಮ ಪರಿಸರ ವಲಯದ ಷರತ್ತುಗಳು ಹಾಗೂ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮತಿ** ನೀಡಲು ತೀರ್ಮಾನಿಸಲಾಗಿದೆ.

1) ಮೇಲ್ಕಂಡ ಪ್ರಸ್ತಾಪಿತ ಪ್ರದೇಶದಲ್ಲಿ ಪ್ರಸ್ತುತ ಇರುವ ಮರಗಿಡಗಳನ್ನು ನಾಶಪಡಿಸಬಾರದು.
2) ಸದರಿ ಪ್ರದೇಶದಲ್ಲಿ 1.00 ಎಕರೆಗೆ ಕನಿಷ್ಟ 10 ಮರಗಿಡಗಳನ್ನು ನೆಟ್ಟು ಬೆಳೆಸಬೇಕು.
3) ಸದರಿ ಪ್ರದೇಶದ ಸುತ್ತಮುತ್ತ ಯಾವುದೇ ಒತ್ತುವರಿ, ಅರಣ್ಯ ಉತ್ಪನ್ನ ಬಳಕೆ, ಪ್ರಾಣಿ–ಪಕ್ಷಿಗಳ ಭೇಟೆ ಹಾಗೂ ಇನ್ನೀತರೆ ಯಾವುದೇ ಅರಣ್ಯ ಅಪರಾಧಗಳು ನಡೆಯದಂತೆ ನೋಡಿಕೊಳ್ಳುವುದು.
4) ಸದರಿ ಪ್ರದೇಶದ ಸುತ್ತ ಮಣ್ಣು ಸವಕಳಿ ಆಗದಂತೆ ಎಚ್ಚರ ವಹಿಸುವುದು.
5) ಸದರಿ ಪ್ರದೇಶದಿಂದ ಹತ್ತಿರದ ಅರಣ್ಯ ಪ್ರದೇಶಗಳಿಗೆ ಬೆಂಕಿ ಕಾಲದಲ್ಲಿ ಬೆಂಕಿ ಬೀಳದಂತೆ ಎಚ್ಚರಿಕೆ ವಹಿಸುವುದು ಮತ್ತು ವನ್ಯಜೀವಿ ಸಂಪತ್ತಿಗೆ ತೊಂದರೆಯಾಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸುವುದು.
6) ಸದರಿ ಪ್ರದೇಶದಲ್ಲಿ ಪ್ರಸ್ತಾಪಿತ ಯೋಜನೆಯನ್ನು ಜಾರಿ ಮಾಡುವಾಗ ಯಾವುದೇ ರೀತಿಯ ಬ್ಲಾಸ್ಟಿಂಗ್/ಸಿಡಿಮದ್ದುಗಳನ್ನು ಬಳಸುವುದು ನಿಷೇದಿಸಿದೆ.
7) ಪ್ರಸ್ತಾಪಿತ ಯೋಜನೆಯ ನಿರ್ಮಾಣದಿಂದ ಹಾಗೂ ನಂತರ ಬರುವ ಆಯಿಲ್ ಹಾಗೂ ಇತರೆ ಗ್ಯಾಬೇಜ್‌ಗಳು ಯಾವುದೇ ನದಿ/ಕೊಳ/ಕಾಲುವೆಗಳಿಗೆ ಸೇರದಂತೆ ನೋಡಿಕೊಳ್ಳಬೇಕು. ಅವುಗಳನ್ನು ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಗಳಂತೆ ವಿಲೇವಾರಿ ಮಾಡಬೇಕು.

8) ಸದರಿ ಪ್ರದೇಶವನ್ನು ಪ್ಲಾಸ್ಟಿಕ್ ಮುಕ್ತ ವಲಯ ಎಂದು ಘೋಷಿಸಬೇಕು.

9) ಸದರಿ ಪ್ರದೇಶದಲ್ಲಿ ರಾತ್ರಿಯ ವೇಳೆ ಪ್ರಾಣಿ–ಪಕ್ಷಿಗಳಿಗೆ ತೊಂದರೆಯಾಗದಂತಹ ಲೈಟಿಂಗ್ಸ್‌ಗಳನ್ನು ಮಾತ್ರ ಬಳಸಬೇಕು.

10) ವಾಯು, ನೀರು ಮತ್ತು ಶಬ್ದ ಮಾಲಿನ್ಯದ ಮಟ್ಟಗಳು ಮಾಲಿನ್ಯ ನಿಯಂತ್ರಣ ಮಂಡಳಿಯು ಅನುಮತಿಸುವ ನಿಯಮಗಳ ಮಿತಿಯೊಳಗೆ ಇರಬೇಕು.

11) ಪ್ರಸ್ತಾಪಿತ ಸ್ಥಳ ಅಥವಾ ಸುತ್ತಮುತ್ತಲಿನ ಪ್ರದೇಶದಲ್ಲಿ ಉದ್ದೇಶಿಸಿರುವ ಕೆಲಸಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಪಕ್ಷಿಗಳ ಗೂಡುಗಳನ್ನು ನಾಶ ಮಾಡುವುದಾಗಲಿ, ಸಂತಾನೋತ್ಪತ್ತಿ ಕಾರ್ಯಗಳಿಗೆ ಮತ್ತು ಅವುಗಳ ಆವಾಸ ಸ್ಥಾನಕ್ಕೆ ತೊಂದರೆ ಕೊಡುವುದನ್ನು ನಿಷೇಧಿಸಿದೆ.

12) ಪ್ರಸ್ತಾಪಿತ ಯೋಜನೆಯ ನಿರ್ಮಾಣ ಹಂತದಲ್ಲಿ ಅಥವಾ ನಿರ್ಮಾಣದ ನಂತರದಲ್ಲಿ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಂತಹ ಸಂದರ್ಭದಲ್ಲಿ ಕಾನೂನಿನ ಅನ್ವಯ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಯಾವುದೇ ಮುನ್ಸೂಚನೆ ನೀಡದೇ ಮಾನಿಟರಿಂಗ್ ಕಮಿಟಿಯಲ್ಲಿ ನೀಡಿದ ಅನುಮತಿಯನ್ನು ಹಿಂಪಡೆಯಬಹುದಾಗಿರುತ್ತದೆ.

13) ಮೇಲಿನ ಷರತ್ತುಗಳ ಜೊತೆಯಲ್ಲಿ ಕಾಲಕಾಲಕ್ಕೆ ಸರ್ಕಾರದ ಮಟ್ಟದಲ್ಲಿ ನೀಡಲಾಗುವ ಆದೇಶಗಳ ಹಾಗೂ ವಿಧಿಸುವ ಷರತ್ತುಗಳ ಅನ್ವಯ ಮಾನಿಟರಿಂಗ್ ಕಮಿಟಿ ನೀಡುವ ನಿರ್ದೇಶನಗಳನ್ನು ಪಾಲಿಸಲು ಬದ್ಧನಾಗಿರುತ್ತೇನೆ.

ತಮ್ಮ ವಿಶ್ವಾಸಿ
**ಸಹಿ/-**
ಸದಸ್ಯ ಕಾರ್ಯದರ್ಶಿ,
ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ,
ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ
ವನ್ಯಜೀವಿ ವಿಭಾಗ, ಮೈಸೂರು

ಪ್ರತಿಯನ್ನು

- ಗೌರವಗಳೊಂದಿಗೆ ಅಧ್ಯಕ್ಷರು, ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ, ಮೇಲುಕೋಟೆ ವನ್ಯಧಾಮ ಹಾಗೂ ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
- ಶುಭಾಶಯಗಳೊಂದಿಗೆ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
- ವಲಯ ಅರಣ್ಯಾಧಿಕಾರಿ, ವನ್ಯಜೀವಿ ವಲಯ, ಮೈಸೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
- ಕಛೇರಿ ಪ್ರತಿ.

ಸದಸ್ಯ ಕಾರ್ಯದರ್ಶಿ,
ಸೂಕ್ಷ್ಮ ಪರಿಸರ ವಲಯದ ಮಾನಿಟರಿಂಗ್ ಕಮಿಟಿ,
ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ
ವನ್ಯಜೀವಿ ವಿಭಾಗ, ಮೈಸೂರು

Ashokapuram, Aranya Bhavana, Mysore
Phone : 0821-2481159 email :
dcfwlmys@gmail.com

# Office of The Deputy Conservator of Forests, Wildlife Division, Mysore

No: A2/ACT/GL-396/2021-22

Date: 28.03.2022

To,

Deputy Conservator of Forest,
Mandya Division,
Mandya

Respected Sir/Madam,

Subject: Regarding Providing Water Supply Scheme to Mahadevapura, K. Shettihalli, Chikkankanahalli and other 16 villages of Srirangapatna Taluk in Mandya District.

Ref: 1. Your office Letter No. C1/Bhoomi/F.C/CR/2021-22 Dt: 25.10.2021
2. This office Even Letter No. Dt: 02.11.2021
3. Range Forest Officer, Wildlife Range, Mysore Letter No. RFO/Wlife/My/F.L/2021-22 Dt: 07.02.2022
4. This office Meeting Intimation Letter No. A2/ACT/E.S.Z/Meeting//G.L 1054/2018-19 Dt: 29.01.2022
5. Meeting Proceedings of Wildlife Sanctuary Division's Eco Sensitivity Zone's Monitoring Committee Dt: 09.02.2022

Pertaining to the above-mentioned Subject, with Ref (1), In your Office Letter Opinion has beenrequested for the pipeline work of Providing Water Supply Scheme to Mahadevapura, K. Shettihalli, Chikkankanahalli and other 16 villages of Srirangapatna Taluk in Mandya District Scheme as it falls under the jurisdiction of Wildlife Eco Sensitive Zone of Ranganatittu Bird Sanctuary. Further it was directed to the Range Forest Officer, Wildlife Range, Mysore for the Inspection Report and Opinion regarding the same in Reff (2).

As per Reff (3) Range Forest Officer, Wildlife Range, Mysore, reported that, since the place for which No Objection Cirtificate to lay the pipeline is requested, falls into The Eco Sensitive Zone of Wildlife and It has to be Presented before Wildlife Division's Eco Sensitive Zone Monitoring Committee.

Executive Engineer
RDW & SD. Mandya.

As per the Directions of Regional Commissioner, Mysore Region, Mysore in their Letter dated 25.01.2022, A Meeting Notice is issued for the Meeting of Wildlife Division's Eco Sensitive Zone Monitoring Committee in Ref (4).

As per Ref (5) in the Presidency of Regional Commissioner, Mysore Region, Mysore and The President, Wildlife Division's Eco Sensitive Zone Monitoring Committee, meeting was held on 09.02.2022. The Member Secretory and Deputy Conservator of Forest, Wildlife Division Mysore, Mysore presented that one of the mentioned places, Mahadevapura Dam area is 1.53km away from the Gendehosahalli island Forest Area of Ranganatittu Bird Sanctuary and 0.09kms within the Wildlife Eco Sensitive Zone. Therefore, the proposed work comes under the Regulated Activities.

The President, Wildlife Division's Eco Sensitive Zone Monitoring Committee, in this regard Opinionated that the proposed project is a Multy Village Drinking Water Supply Scheme which is a Basic Amenity and the proposed location is away for more than 1.00kms (1.53kms) from the Gendehosahalli island Forest Area of Ranganatittu Bird Sanctuary. As requested by The Executive Engineer, Rural Drinking Water Supply and Sanitation Division, Mandya, Permission can be given to the proposed project only work related to laying pipeline through Eco Sensitive Zone of Ranganatittu Bird Sanctuary under conditions of Eco Sensitive Zone of Regulated Activities and to carry out proposed work in the land related to Mandya Forest Division, Deputy Conservator of Forest, Mandya Division, Mandya has to be consulted and due Legal procedures to be followed.

As mentioned above, In the meeting held on 09.02.2022 by Wildlife Division's Eco Sensitive Zone Monitoring Committee regarding the project of Providing Water Supply Scheme to Mahadevapura, K. Shettihalli, Chikkankanahalli and other 16 villages of Srirangapatna Taluk in Mandya District, it is Decided to give permission only to Lay Pipeline in the Eco Sensitive Zone of Ranganatittu Bird Sanctuary on the conditions of Eco Sensitive Zone and on following conditions.

1. No trees or vegetation should be cut or damaged within the proposed site.
2. In the mentioned area at least 10 trees should be planted and grown per acre.
3. The applicant should ensure that no wildlife crimes like encroachment of forest land, use of forest produce, or hunting of wildlife or birds take place in and around the proposed area.
4. Care should be taken that there is no soil erosion in and around the proposed area.
5. Necessary care and precaution to be taken so that the wildfire does not spread to surrounding forests.
6. Blasting of dynamites is prohibited in the mentioned area where the project is being implemented.
7. Any garbage /waste generated during the project construction stage or later should not be let out into the river, streams, or canals and should be disposed of properly as per the pollution control Board's norms.
8. The mentioned area should be declared a 'Plastic-free Area'.

Executive Engineer
RDW & SD. Mandya.

9. Only lighting that does not harm the wildlife should be used during night times.
10. Water, Air, and noise pollution levels should be within the permissible levels of the set by the Pollution Control Board.
11. Activities that destroy the nesting's of the birds; disrupt their breeding activities or destroy their habitats are prohibited in the mentioned project area and its surroundings.
12. In case of any violations of the conditions during or after the completion of the project, the Monitoring Committee will be appraised of these violations will be directed to take suitable action. The approval given by the Monitoring Committee may be withdrawn without notice.
13. Along with the compliance with the above-mentioned conditions, the applicant should comply with the directions issued by the Monitoring Committee, and orders issued by the government from time to time.

Yours Faithfully,
Sd/-
The Member Secretory
Eco Sensitive Zone Monitoring Committee
And Deputy Conservator of Forests,
Wildlife Division, Mysore

Copy to,

1) Respected President, Wildlife Eco Sensitive Zone Monitoring Committee, Melukote Wildlife Sanctuary and Regional Commissioner, Mysore Region, Mysore for further needful Action.
2) District Commissioner, Mandya District, Mandya for further needful Action.
3) Range Forest Officer, Wildlife Range, Mysore for Information

The Member Secretory
Eco Sensitive Zone Monitoring Committee
And Deputy Conservator of Forests,
Wildlife Division, Mysore

Executive Engineer
RDW & SD. Mandya.